International Journal of Kannada Research 2023; 9(4): 188-193

International Journal of Kannada Research
www.kannadajournal.com

ISSN: 2454–5813
IJKR 2023; 9(4): 188-193
© 2023 IJKR
www.kannadajournal.com
Received: 03-11-2023
Accepted: 07-12-2023

**ಮಹಾವೀರ ಜೈನ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಕರ್ನಾಟಕ, ಭಾರತ

**Corresponding Author:**
**ಮಹಾವೀರ ಜೈನ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಕರ್ನಾಟಕ, ಭಾರತ

# ಜನ್ನನ ಯಶೋಧರ ಚರಿತೆಯಲ್ಲಿ ಕರ್ಮದ ಸ್ವರೂಪ

**ಮಹಾವೀರ ಜೈನ್**

**ಪೀಠಿಕೆ**

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಜನ್ನನ ಯಶೋಧರ ಚರಿತೆ ಶ್ರೇಷ್ಟ ಕೃತಿಗಳಲ್ಲಿ ಒಂದು. ಯಶೋಧರ ಚರಿತೆಯ ಸಿಂಹಾವಲೋಕನವನ್ನು ಮಾಡಿದಾಗ ಜನಪದ ಸೊಗಡಿನ ಹಿನ್ನಲೆಯಲ್ಲಿ ರಚಿತವಾದುದು ಕಂಡುಬರುತ್ತದೆ. ಚರಿತೆಯಲ್ಲಿ ಉಲ್ಲೇಖಿತವಾದ ಪರಿಸರ, ಆಚರಣೆ, ಪದ್ಧತಿ, ವ್ಯವಸ್ಥೆಗಳು ಇವೆಲ್ಲವೂ ಇದನ್ನು ಪುಷ್ಟೀಕರಿಸುತ್ತದೆ. ಈ ವರೆಗೆ ಕೃತಿಯನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ಅಧ್ಯಯನ ನಡೆಸಲಾಗಿದೆ. ಆದರೆ ಜನ್ನನ ಯಶೋಧರ ಚರಿತೆ ಜೈನ ಧಾರ್ಮಿಕ ಚೌಕಟ್ಟಿನಲ್ಲಿ ರಚನೆಯಾದ ಕಾರಣ ಅದೇ ಹಿನ್ನಲೆಯಲ್ಲಿ ಆಳವಾಗಿ ಅಧ್ಯಯನ ನಡೆಸುವುದು ಅವಶ್ಯವಾಗಿದೆ. ಇಲ್ಲವಾದಲ್ಲಿ ಚರಿತೆಯ ಮುಖ್ಯ ಆಶಯ ಬೆಳಕಿಗೆ ಬರದೇ ಹೋಗಬಹುದು. ಅ ಕಾರಣದಿಂದ ಯಶೋಧರ ಚರಿತೆಯನ್ನು ಜೈನ ಧರ್ಮದ ತತ್ವ ಸಿದ್ಧಾಂತಗಳ ಅನ್ವಯದೊಂದಿಗೆ ಚರಿತೆಯ ಮುಖ್ಯ ಆಶಯವನ್ನು ಬೆಳಕಿಗೆ ತರುವ ಪ್ರಯತ್ನ ನಡೆಸಿದ್ದೇವೆ. ಜೈನ ಧರ್ಮದ ಮೂಲ ಉದ್ದೇಶ ಕರ್ಮಗಳನ್ನು ನಾಶ ಮಾಡಿ ಮೋಕ್ಷ ಅಥವಾ ಸಿದ್ಧಪದವಿ (ಜಿನಪದವಿ) ಯನ್ನು ಸಾಧಿಸುವುದಾಗಿದೆ.

ಕೃತಿಯಲ್ಲಿ ಬರುವ ಸುಖ ದುಃಖ, ಸಾವು ನೋವು, ಪಾಪ ಪುಣ್ಯ, ಹುಟ್ಟು, ಜನ್ಮ ಜನ್ಮಗಳು, ಭವಾವಳಿಗಳು, ಗತಿಗಳು, ದೈಹಿಕ ಭಿನ್ನತೆಗಳು ಇವೆಲ್ಲವೂ ಕರ್ಮವನ್ನೆ ಅವಲಂಭಿಸಿದೆ. ಧರ್ಮದ ಪ್ರಕಾರ ಜೀವಿಗಳು ತಾವು ಅನುಭವಿಸುವ ಎಲ್ಲಾ ಸುಖ ದುಃಖ, ಸಾವು ನೋವು, ಪಾಪ ಪುಣ್ಯ, ಹುಟ್ಟು ಸಾವು ಎಲ್ಲಾ ಅನುಭವಗಳು ಪೂರ್ವನಿರ್ಧರಿತವಾಗಿರುತ್ತದೆ. ಇದಕ್ಕೆ ಕಾರಣ ಜೀವಿಗಳು ಮಾಡುವ ಕರ್ಮಗಳೇ ಆಗಿದೆ. ಹಾಗಾದರೆ ಕರ್ಮ ಹುಟ್ಟಲು ಯಾವುದು ಕಾರಣ? ಎಂಬ ಪ್ರಶ್ನೆ ಉದ್ಭವಿಸಬಹುದು. ಕರ್ಮಕ್ಕೆ ಕಾರಣ ನಾವು ಮಾಡುವ ಕೆಲಸಗಳು, ನಮ್ಮ ಭಾವನೆಗಳು ಹಾಗೂ ನಮ್ಮ ನಡವಳಿಕೆಗಳೇ ಕಾರಣವಾಗುತ್ತದೆ. ಯಶೋಧರ ಚರಿತೆಯಲ್ಲಿ ಯಶೋಧರನೇ ಕೇಂದ್ರ ಬಿಂದು ಅವನ ಭವಾವಳಿಗಳು ಸುಖ ದುಃಖ, ಸಾವು ನೋವು, ಮದುವೆ, ಮಕ್ಕಳು ಅವನ ವೈರಾಗ್ಯ ಇವೇ ಮುಖ್ಯ ವಿಚಾರಗಳು.

ಯಶೋಧರ ಚರಿತೆಯ ಪ್ರಾರಂಭದ ನಾಂದಿ ಪದ್ಯದಲ್ಲಿ ಕವಿ ಭಗವಂತನಿಗೆ, ಹಿರಿಯರಿಗೆ, ಮಾರ್ಗದರ್ಶಕರಿಗೆ ನಮಿಸುತ್ತಾ ಕಾವ್ಯವನ್ನು ಪ್ರಾರಂಭಿಸುತ್ತಾನೆ. ನಾಂದಿ ಪದ್ಯದಲ್ಲಿಯೂ ಕರ್ಮದ ವಿಚಾರ ಪ್ರಮುಖವಾಗಿ ಪ್ರಸ್ತಾಪಿಸಲ್ಪಡುತ್ತದೆ. ಯಶೋಧರ ಚರಿತೆಯನ್ನು ಆಲಿಸುವುದೆಂದರೆ ಚಂದ್ರೋದಯವಾದಂತೆ ಆಗ ಕತ್ತಲೆಯಂತಿರುವ ಪಾಪವೆಲ್ಲಾ ತೊಲಗುತ್ತದೆ ಎಂಬ ಮಾತು ಬಂದಿದೆ. ಇಲ್ಲಿ ಪಾಪವೆಂದರೆ ಕರ್ಮವೇ ಆಗಿದೆ. ಇಲ್ಲಿ ಕಥೆಯನ್ನು ಹೇಳುವ ಮತ್ತು ಕೇಳುವ ಎರಡರ ಉದ್ದೇಶವು ಕರ್ಮಗಳ ನಾಶವೇ ಆಗಿದೆ.

ಭರತ ಖಂಡದ ಅಯೋಧ್ಯ ದೇಶಕ್ಕೆ ರಾಜಪುರವೇ ರಾಜಧಾನಿ. ಅದು ಇಡೀ ಲೋಕಕ್ಕೆ ಶಿರೋಭೂಷಣದಂತೆ ಶೋಭಿಸುತ್ತಿತ್ತು. ತ್ಯಾಗದ ತವರು, ಭೋಗದ ಭವನ ಎಂಬಂತ್ತಿತ್ತು. ಇಲ್ಲಿ ತ್ಯಾಗ ಮತ್ತು ಭೋಗ ಎರಡು ವಿಷಯಗಳು ಕರ್ಮದ ಹಿನ್ನಲೆಯನ್ನೆ ಸೂಚಿಸುತ್ತದೆ. ಅದನ್ನು ಸಾತವೇದನೀಯ ಕರ್ಮೋದಯದ ಕಾರಣದಿಂದ ಮಾರಿದತ್ತನೆಂಬ ರಾಜನು ಆಳುತ್ತಿದ್ದನು. ಅ ರಾಜಪುರದ ದಕ್ಷಿಣ ಭಾಗದಲ್ಲಿ ಚಂಡಮಾರಿ ಎಂಬ ಹೆಸರಿನ ದೇವತೆ ನೆಲೆಸಿದ್ದಳು. ಪ್ರತಿನಿತ್ಯ ಆತ್ಮನಿಗೆ ನರಕಾಯು, ನರಕಗತಿ, ಅಸಾತವೇದನೀಯ ಕರ್ಮಗಳು ಬಂಧವಾಗುವ ಹಿಂಸಾತ್ಮಕವಾದ ಮಿಥ್ಯಾ ಆಚರಣೆಗಳು ಅವಳಿಗೆ ನಡೆಯುತ್ತಿತು.

ಅನೇಕ ಪ್ರಾಣಿಗಳ ಹತ್ಯೆಯೇ ಅವಳಿಗೆ ಸುಖೋದ್ಧೀಪನ ಎನಿಸಿತ್ತು. ಅ ನಗರದ ಜನರೆಲ್ಲರೂ ತಮ್ಮ ರಾಜನನ್ನು ಮುಂದುಮಾಡಿಕೊಂಡು ಅಶ್ವಯುಜ ಮತ್ತು ಚೈತ್ರಮಾಸಗಳಲ್ಲಿ ಅಲ್ಲಿ ಜಾತ್ರೆ ಸೇರಬೇಕು, ಎಲ್ಲ ಬಗೆಯ ಪೂಜೆಗಳನ್ನು ಮಾಡಬೇಕು, ಹಾಗೆ ಮಾಡದಿದ್ದಲ್ಲಿ ಆ ದೇವತೆ ಅಷ್ಟು ಮಂದಿಯನ್ನು ಒಮ್ಮೆಲೆ ಧ್ವಂಸಗೊಳಿಸಿಯಾಳು ಎಂಬ ಮಿಥ್ಯಾ ಭಾವನೆ ಅವರಲ್ಲಿತ್ತು. ಇಂಥ ಮಿಥ್ಯಾ ಭಾವನೆ ಎಲ್ಲರಲ್ಲಿಯೂ ಬರಲು ಸಾಧ್ಯವಿಲ್ಲ, ಜೀವಿಯ ಮೋಹನೀಯ ಕರ್ಮದ ಉತ್ತರ ಭೇದವಾದ, ದರ್ಶನ ಮೋಹನೀಯ ಕರ್ಮದ ಮಿಥ್ಯಾತ್ವ ಕರ್ಮ ಪ್ರಕಟಗೊಂಡಾಗ ಈ ರೀತಿಯ ಕುಕೃತ್ಯಗಳು ನಡೆಯುತ್ತವೆ.

ಚೈತ್ರಮಾಸವು ಬಂದಿತು. ಮಾರಿದತ್ತ ರಾಜನೂ, ನಗರದ ಜನರು, ಎಲ್ಲರೂ ಸೇರಿ ಚಂಡಮಾರಿ ದೇವತೆಗೆ ಸಂತೋಷವಾಗುವಂತೆ ಜಾತ್ರೆಯನ್ನು ನೆರವೇರಿಸಲು ಅಲ್ಲಿ ಸೇರಿದರು. ಮಿಥ್ಯಾದೃಷ್ಟಿಗಳು ಪಾಪ ಬಂಧವಾಗುವ ದೈಹಿಕ ಹಾಗೂ ಮಾನಸಿಕ ಹಿಂಸೆಯಿಂದ ಖಡ್ಗದಿಂದ ತಮ್ಮನ್ನು ತಾವೇ ಇರಿದುಕೊಂಡು ಅರ್ಚನೆಯನ್ನು ಸಲ್ಲಿಸುವ ಹಾಗೂ ಬೇರೆ ರೀತಿಯಲ್ಲಿ ಹರಕೆಯನ್ನೊಪ್ಪಿಸುವ ಲಕ್ಷೋಪಲಕ್ಷ ದೇವಿ ಭಜಕರು ಅಲ್ಲಿ ಸಿದ್ಧರಾದರು ಅವರನ್ನೆಲ್ಲ ಕೂಡಿಕೊಂಡು ಮಾರಿದತ್ತನು ದೇವಿಯ ಗುಡಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿದನು. ಅನಂತರ ದೇವಾಲಯದ ರಂಗಮಂಟಪದಲ್ಲಿ ನಿಂತುಕೊಂಡನು.

ತನ್ನ ತಳವಾರನನ್ನು ಕರೆದು, ಹಿಂಸೆಗಳಲ್ಲಿ ಅತ್ಯಂತ ನಿಕೃಷ್ಟವಾದ, ನರಕಾಯುಕರ್ಮ ಆತ್ಮನಿಗೆ ಬಂಧಮಾಡುವ ಸಂಕಲ್ಪ ಹಿಂಸೆಯ ಭಾವಯನ್ನು ತಾಳಿ, "ನೀನು ಈಗಲೇ ಇಬ್ಬರು ಮನುಷ್ಯರನ್ನು ಹಿಡಿದು ತರಬೇಕು, ಎಂದಿನಂತೆ ಮೊದಲು ನಾನೇ ಅವರನ್ನು ದೇವಿಗೆ ಬಲಿಕೊಟ್ಟು ಅರ್ಚಿಸಬೇಕಾಗಿದೆ. ಪದ್ಧತಿ ಪ್ರಕಾರ ನಡೆದುಕೊಳ್ಳದಿದ್ದರೆ ದೇವಿಗೆ ಸಿಟ್ಟಾದೀತು. ಪರಿಣಾಮವಾಗಿ ಅವಳು ನಮ್ಮ ವಿಷಯದಲ್ಲಿ ತಪ್ಪಿ ನಡೆಯಲಾರಳು ಆದುದರಿಂದ ತಕ್ಷಣ ಹಿಡಿದು ತಾ, ಉಳಿದ ನಾಗರಿಕರೆಲ್ಲರೂ ಸಾವಿರ ಸಾವಿರ ಜೀವ ರಾಶಿಯನ್ನು ಬಲಿ ಕೊಡಲು ಸಿದ್ಧರಿದ್ದಾರೆ ತಡಮಾಡಬೇಡ" (ಯಶೋಧರ ಚರಿತೆ, ಪು. ೨೧) ಎಂದು ಅಜ್ಞಾಪಿಸಿದನು. ಇದರಿಂದ ಮಾರಿದತ್ತನಿಗೆ ನರಕಾಯು, ನರಕಗತಿ ಪಾಪಕರ್ಮ ಆತನ ಆತ್ಮನಿಗೆ ಅಂಟುತ್ತದೆ.

ತಕ್ಷಣ ತಳಾರ ತನ್ನ ಕಿಂಕರರೊಂದಿಗೆ ಎಳೆಯ ವಯಸ್ಸಿನ ಒಳ್ಳೆಯ ವಂಶದಲ್ಲಿ ಜನಿಸಿದ ಮಾನವ ಜೋಡಿಯನ್ನು ಹುಡುಕುತ್ತಾ ಹೊರಟರು. ಈ ಕಡೆಯಿಂದ ಸುದತ್ತಾಚಾರ್ಯರ ಶಿಷ್ಯರಾದ ಅಭಯರುಚಿ ಮತ್ತು ಅಭಯಮತಿ ಚರಿಗೆಗೆಂದು ಹೊರಟಿರುವ ಸಂದರ್ಭದಲ್ಲಿ ಪಾಪ ಕರ್ಮದಲ್ಲಿ ತೊಡಗಿರುವ ಚಂಡಕರ್ಮನು ಹುಲಿ ಜಿಂಕೆಯನ್ನು ಹಿಡಿಯುವ ರೀತಿ ಹಿಡಿದನು. ಚಂಡ ಕರ್ಮನ ಉದ್ದೇಶವನ್ನು ತಿಳಿದ ಅಣ್ಣನಾದ ಅಭಯರುಚಿ ಹೇಳುತ್ತಾನೆ "ಎಲೇ ತಂಗಿ ನಮಗೆ ಸಾವು ಹತ್ತಿರವಾಗಿಯೆಂದು ಹೆದರಬೇಡ ವಿಧಿನಿಯಮವನ್ನು ಯಾರಾದರೂ ಮೀರಲು ಸಾಧ್ಯವೇ?" ಎಂದು ಪ್ರಶ್ನಿಸಿದಾಗ ತಂಗಿ ಅಭಯಮತಿ ಹೇಳುತ್ತಾಳೆ "ಮಾಡಿದುದ ಫಲವನ್ನು ನಾವು ಉಣ್ಣದೇ ಹೋಗಲು ಸಾಧ್ಯವೇ? ಅದಕ್ಕಾಗಿ ಭಯಪಡುವುದೇಕೆ" (ಯಶೋಧರ ಚರಿತೆ, ಪು. ೨೩) ಎಂದು.

ಅಭಯರುಚಿ ಹೇಳುವ ವಿಧಿನಿಯಮ ಹಾಗೂ ಅಭಯಮತಿ ಹೇಳುವ ಮಾಡಿದ ಫಲವನ್ನು ನಾವೇ ಉಣ್ಣಬೇಕು ಈ ಎರಡು ಮಾತುಗಳು ಸ್ಪಷ್ಟವಾಗಿ ಕರ್ಮಸಿದ್ಧಾಂತವನ್ನೇ ಸಾರುತ್ತದೆ. ನಾವು ಮಾಡುವ, ಮಾಡಿರುವ ಕರ್ಮದ ಫಲವನ್ನು ನಾವೇ ಅನುಭವಿಸಬೇಕು ಅದು ಸುಖ ಅಥವಾ ದುಃಖವಾಗಿರಬಹುದು. ಇಲ್ಲಿ ಇಬ್ಬರು ದುಃಖ, ಕಷ್ಟ ಪಡುತ್ತಿದ್ದಾರೆ ಇದಕ್ಕೆ ಕಾರಣ ಹಿಂದಿನ ಭವಗಳಲ್ಲಿ ಮಾಡಿರುವ ಅಸಾತವೇದನೀಯ ಪಾಪಕರ್ಮ ಹಾಗೂ ಅವರು ಮಾಡಲು ಬಂದಿರುವ ಕರ್ತವ್ಯಕ್ಕೆ ಅಡ್ಡಿಯಾಗಲು ಅಂತರಾಯ ಕರ್ಮದ ಭೇದವಾದ ಭೋಗಾಂತರಾಯಕರ್ಮ ಕಾರಣವಾಗಿದೆ. ಹಾಗೆಯೇ ಚಂಡಕರ್ಮ ಮಾಡುತ್ತಿರುವ ಪಾಪ ಕೆಲಸದಿಂದ ಅವನಿಗೆ ಅಸಾತವೇದನೀಯ ಹಾಗೂ ಅಂತರಾಯ ಕರ್ಮ ಬಂಧವಾಗುತ್ತದೆ. ಇಲ್ಲಿ ಅಭಯರುಚಿ ಮತ್ತು ಅಭಯಮತಿ ತಮ್ಮ ಆತ್ಮನಿಗೆ ಬಂಧವಾದ ಕರ್ಮವನ್ನು ಅನುಭವಿಸುತ್ತಿದ್ದರೆ, ಚಂಡಕರ್ಮನ ಕೆಟ್ಟ ಕೆಲಸದಿಂದ ಆತನ ಆತ್ಮನಿಗೆ ನರಕಾಯು, ನರಕಗತಿ ಪಾಪಕರ್ಮ ಬಂಧವಾಗುತ್ತಿದೆ.

ಇರ್ವರು ಮಕ್ಕಳನ್ನು ಚಂಡಕರ್ಮ ಚಂಡಮಾರಿ ದೇವತೆಯ ಆಲಯದ ಬಳಿಗೆ ಕರೆದೊಯ್ಯುತ್ತಾನೆ. ಮಾರಿಗುಡಿ ಯಮನ ಅಡುಗೆ ಮನೆಯಂತಿತ್ತು. ಇಲ್ಲಿ ಎಲ್ಲರೂ ಪಾಪ ಕರ್ಮಗಳನ್ನೇ ಮಾಡುತ್ತಿದ್ದಾರೆ, ಅಲ್ಲಿ ಬಲಿಗಾಗಿ ತಂದಿದ್ದ ಪ್ರಾಣಿಗಳು ಅವುಗಳ ಅಸಾತವೇದನೀಯ ಕರ್ಮೋದಯದ ಪರಿಣಾಮದಿಂದ ಕರ್ಕಶವಾಗಿ ಅರಚುತ್ತಿದ್ದವು. ಮಾರಿಗುಡಿಯ ಹೊರಭಾಗದಲ್ಲಿ ಬಲಿಯಾದ ಮಾನವರ ಬುರುಡೆಗಳನ್ನು ಇಡಲಾಗಿತ್ತು, ಇವೆಲ್ಲದರ ಮಧ್ಯದಲ್ಲಿ ಮಾರಿದತ್ತ ನಿಂತಿದ್ದನು. ಅವನ ಸಮ್ಮುಖದಲ್ಲಿ ಈ ಸುಂದರವಾದ ಇಬ್ಬರು ಮಕ್ಕಳನ್ನು ತಂದು ನಿಲ್ಲಿಸಲಾಯಿತು. ಅ ಮಕ್ಕಳನ್ನು ಕಂಡು ಮಾರಿದತ್ತ ಅಚ್ಚರಿಗೊಂಡನು. ಕರ್ಮಸಿದ್ಧಾಂತದ ಪೂರ್ಣ ಜ್ಞಾನ ಹೊಂದಿರುವ, ನಮ್ಮ ಎಲ್ಲಾ ಅನುಭವಗಳಿಗೂ ನಮ್ಮ ಸ್ವಯಾರ್ಜಿತ ಕರ್ಮಗಳೇ ಕಾರಣ ಎಂದು ತಿಳಿದಿರುವ ಇರ್ವರು ಮಕ್ಕಳಲ್ಲಿ ಯಾವುದೇ ಸಾವಿನ ಭಯ, ಆತಂಕವಿರಲಿಲ್ಲ.

ಅಣ್ಣ ಅಭಯರುಚಿಯು "ರಾಜ ಶ್ರೇಷ್ಠನೇ ನಿರ್ಮಲ ಧರ್ಮದಿಂದ ಧರೆಯನ್ನು ಪಾಲಿಸು ಎಂದು ಹರಸಿದ" (ಯಶೋಧರ ಚರಿತೆ, ಪು. ೨೫) ಇದನ್ನು ಕೇಳಿದ ನೋಡಿದ ಮಾರಿದತ್ತ ಅಚ್ಚರಿಯಿಂದ "ನಾನು ಈವರೆಗೂ ಈ ಸ್ಥಳದಲ್ಲಿ ಅಂಜದಿರುವವರನ್ನಾ ನೋಡಿಲ್ಲ, ನಿಂತ ನನಗೂ ನನ್ನ ಖಡ್ಗಕ್ಕೂ ಈ ವಾತವರಣಕ್ಕೂ ಒಂದಿಷ್ಟು ಹೆದರದೆ ಧೈರ್ಯದಿಂದ ಪ್ರೀತಿಯ ಮಾತುಗಳನ್ನಾಡುತ್ತಿರುವ ಇವರ ನಡತೆ ಕಾಂತಿಯನ್ನು ಗಮನಿಸಿದ ರಾಜ, "ನೀವು ಯಾರು? ನಿಮ್ಮ ಕುಲ ಯಾವುದು? ಭಿಕ್ಷಾ ವೃತ್ತಿಯನ್ನು ಮಾಡುತ್ತಿರುವ ಉದ್ದೇಶ?" ಏನೆಂದು ಕೇಳುತ್ತಾನೆ.

ಅರಸ ಕೇಳು ಎಂದು ಅಭಯರುಚಿ "ನಮ್ಮ ಚಾರಿತ್ರ ನಿರ್ಮಲವಾದುದು, ಅದು ಒಳ್ಳೆಯವರಿಗೆ ಧರ್ಮಪರರಿಗೆ ಮಾತ್ರ ರುಚಿಸುತ್ತದೆಯೇ ಹೊರತು ಇತರರಿಗೆ ರುಚಿಸದು. ನೀನು ಪಾಪ ಕರ್ಮದ ಅಧರ್ಮದ ದಾರಿಯಲ್ಲಿ ನಡೆಯುತ್ತಿರುವೇ ಇದೆಲ್ಲಾ ನಿನಗೆ ಅರ್ಥವಾಗೋದಿಲ್ಲ ನೀನು ನಿನ್ನ ಕೆಲಸ ಮಾಡು"(ಯಶೋಧರ ಚರಿತೆ, ಪು. ೨೬)ಎನ್ನಲು, ಮಾರಿದತ್ತ ಅಶ್ಚರ್ಯದಿಂದ ಅವರ ವೃತ್ತಾಂತವನ್ನು ಕೇಳಿದಾಗ, ಈ ಹಿಂದೆ ಮಾಡಿರುವ ಅಧರ್ಮ ಕಾರ್ಯಗಳಿಂದ ಈ ಭವದಲ್ಲಿ ದುಃಖ ಲಭಿಸಿದೆ ಎಂದು ಹೇಳುತ್ತಾ ಇಹ ಪರದ ಸಮ್ಯಕ್ತ್ವ ಸಂಗತಿಗಳನ್ನು, ಸಂಸಾರದ ನಶ್ವರತೆಯನ್ನು ವಿಸ್ತರಿಸಿ ಹೇಳಿದಾಗ ಮಾರಿದತ್ತನ ಮಿಥ್ಯಾದೃಷ್ಟಿತ್ವ ದೂರವಾಗಿ ಅವನ ಮನಸ್ಸು ಧರ್ಮ ಮಾರ್ಗದಲ್ಲಿ ಸಾಗಲು ಪ್ರಾರಂಭಿಸಿತು. ಅಗ ಅಭಯರುಚಿ ಮಾರಿದತ್ತನಿಗೆ ಮುಕ್ತಿಕಾಂತೆ ಅಂದರೆ ಅಷ್ಟಕರ್ಮಗಳನ್ನು ಗೆದ್ದು ಮೋಕ್ಷವನ್ನು ದಯಪಾಲಿಸುವ ಅವರ ಹಿಂದಿನ ಭವಗಳ ಕಥೆಯನ್ನು ಹೇಳಲಾರಂಭಿಸಿದನು.

ಅವಂತಿ ಎಂಬ ದೇಶ ಅದರ ರಾಜಧಾನಿ ಉಜ್ಜಯನಿಪುರ ಅದನ್ನು ಆಳುತ್ತಿದ್ದವನು ಯಶೌಘ ಎಂಬ ರಾಜ ಅವನ ರಾಣಿ ಚಂದ್ರಮತಿ ಅವರ ಪೂರ್ವಾರ್ಜಿತ ಪುಣ್ಯ ಕರ್ಮದ ಸಾತವೇದನೀಯ ಕರ್ಮದ ಪ್ರಕಟವಾದ ಕಾರಣದಿಂದ ಅತ್ಯಂತ ಸುಂದರವಾದ ಸುಖ ಭೋಗದಿಂದ ಕೂಡಿದ ದಾಂಪತ್ಯವನ್ನು ಅನುಭವಿಸುತ್ತಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಯಶೋಧರನೆಂಬ ಮಗನು ಜನಿಸಿದನು. ಕುಮಾರ ಯಶೋಧರನು ಸೌಂದರ್ಯದಲ್ಲಿ ಅಸಮಾನ್ಯನಾಗಿ ವಿದ್ಯಾಧರನಂತೆ

ಅತ್ಯಾಕರ್ಷಕನಾಗಿದ್ದನು. ಅವನನ್ನು ನೋಡುವುದು ಮಾತನಾಡಿಸುವುದೇ ಒಂದು ಆನಂದ. ಯಶೋಧರನ ಈ ದೇಹ ಸೌಂದರ್ಯಕ್ಕೆ ಕಾರಣ ಹಿಂದಿನ ಭವಗಳಲ್ಲಿ ಮಾಡಿದ ಶುಭನಾಮ ಕರ್ಮವಾಗಿದೆ. ಎಲ್ಲ ವ್ಯಕ್ತಿಗಳು ಸುಂದರವಾದ ದೇಹವನ್ನು ಆಕಾರವನ್ನು ಬಣ್ಣವನ್ನು ಹೊಂದಿರುವುದಿಲ್ಲ. ಕೆಲವರು ವಕ್ರವಾದ, ಕುಬ್ಜವಾದ, ನ್ಯೂನ್ಯತೆಗಳಿಂದ ಕೂಡಿರುವ ದೇಹವನ್ನು ಹೊಂದಿರುತ್ತಾರೆ. ಇವೆಲ್ಲದಕ್ಕೂ ಶುಭ ಮತ್ತು ಅಶುಭ ನಾಮಕರ್ಮವೇ ಕಾರಣವಾಗಿದೆ. ಯಶೋಧರನಿಗೆ ಅನುರೂಪಳಾದ ಅವನ ಮನದನ್ನೆ ಅಮೃತಮತಿ.

ಒಂದು ದಿನ ರಾಜ ಸಭೆಯಲ್ಲಿ ಯಶೌಘನು ದರ್ಪಣದಲ್ಲಿ ತನ್ನ ಬಿಳಿ ಕೂದಲೊಂದನ್ನು ಕಂಡು ಜೀವನದ ಬಗ್ಗೆ ವೈರಾಗ್ಯವನ್ನು ತಾಳುತ್ತಾನೆ. ವೈರಾಗ್ಯ ಉಂಟಾಗಲು ಮುಖ್ಯ ಕಾರಣ ಅವನಲ್ಲಿ ಅ ಕ್ಷಣದವರೆಗೆ ಇದ್ದ ಮೋಹನೀಯ ಕರ್ಮದ ನಾಶ. ಪರವಸ್ತುಗಳ ಬಗ್ಗೆ (ದೇಹವನ್ನು ಸೇರಿಸಿ) ಇದ್ದ ಮೋಹ ದೂರವಾಗುವುದು. ಬಳಿಕ ತನ್ನ ಸಕಲವನ್ನು ಮಗನಾದ ಯಶೋಧರನಿಗೆ ಒಪ್ಪಿಸಿ ತಪಕ್ಕೆ ನಡೆದನು. ಇತ್ತ ಯಶೋಧರನು ತನ್ನ ರಾಜ್ಯಭಾರದ ಯಶಸ್ಸನ್ನು ಎಲ್ಲಕಡೆಗೂ ಪಸರಿಸಿದನು.

ಒಂದು ದಿನ ಧವಳಾಗಾರದಲ್ಲಿ ಯಶೋಧರ ಅಮೃತಮತಿಯನ್ನು ಸೇರಿಕೊಂಡನು. ಅಭ್ರಮುವನ್ನು ಕೂಡಿಕೊಂಡು ಐರಾವತವು ಬಹು ಸಂಭ್ರಮದಿಂದ ಶಯ್ಯಾಗಾರಕ್ಕೆ ಬಂದಂತೆ ಈ ದಂಪತಿಗಳು ಕಾಣುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ಒಲುಮೆಯಿಂದ ನೋಡುತ್ತಿದ್ದರು, ಒಬ್ಬರ ದೇಹ ಇನ್ನೊಬ್ಬರ ದೇಹ ಸ್ಪರ್ಶಿಸಿತು, ಪರಸ್ಪರ ಆಲಂಗಿಸಿಕೊಂಡರು, ಪ್ರಣಯಿಗಳಿಬ್ಬರೂ ಮಲಗಿದ ಹೊತ್ತು. ಈ ಸಂದರ್ಭವನ್ನು ಗಮನಿಸಿದಾಗ ಯಶೋಧರನಿಗೆ ಮತ್ತು ಅಮೃತಮತಿಗೆ ಅತ್ಯಂತ ತೀಕ್ಷ್ಣವಾದ ಪುಂವೇದ ಹಾಗೂ ಸ್ತ್ರೀವೇದ ಮೋಹನೀಯಕರ್ಮ ಉದಯಕ್ಕೆ ಬಂದಿರುವುದು ಕಂಡುಬರುತ್ತದೆ.

ಮೋಹನೀಯ ಕರ್ಮದಲ್ಲಿ ಪ್ರಮುಖವಾಗಿ ಎರಡು ಭೇದಗಳಿವೆ ದರ್ಶನ ಮೋಹನೀಯ ಹಾಗೂ ಚಾರಿತ್ರ್ಯ ಮೋಹನೀಯ ಚಾರಿತ್ರ್ಯ ಮೋಹನೀಯದಲ್ಲಿ ಇಪ್ಪತ್ತೈದು ಒಳಭೇದಗಳಿವೆ ಅವುಗಳೆಂದರೆ ಹದಿನಾರು ಕಷಾಯಗಳು ಒಂಭತ್ತು ನೋ ಕಷಾಯಗಳು, ಈ ಸಂದರ್ಭದಲ್ಲಿ ಅವರಿರ್ವರಲ್ಲಿ ಪ್ರಕಟಗೊಂಡ ಕರ್ಮ ಏಳು ಮತ್ತು ಎಂಟನೇ ನೋ ಕಷಾಯಗಳಾದ ಸ್ತ್ರೀವೇದ ಮತ್ತು ಪುಂವೇದ ಕರ್ಮ ಅಂದರೆ ಸ್ತ್ರೀವೇದ ಕರ್ಮದ ಉದಯದಿಂದಾಗಿ ಜೀವಕ್ಕೆ ಪುರುಷನೊಡನೆ ರಮಿಸುವ ಆಸೆಯುಂಟಾಗುತ್ತದೆ, ಪುಂವೇದ ಕರ್ಮದ ಉದಯದಿಂದಾಗಿ ಸ್ತ್ರೀಯೊಂದಿಗೆ ರಮಿಸುವ ಇಚ್ಚೆಯಾಗುತ್ತದೆ. ಈ ಎರಡು ಕರ್ಮಗಳ ಉದಯವನ್ನು ಯಶೋಧರ ಮತ್ತು ಅಮೃತಮತಿಯರಲ್ಲಿ ಕಾಣಬಹುದು.

ಈ ರೀತಿಯಾಗಿ ದಂಪತಿಗಳಿಬ್ಬರು ಮಲಗಿದರು. ಬೆಳಗಿನ ಜಾವ ಅರಮನೆಯ ಪಕ್ಕದಲ್ಲಿದ್ದ ಪಟ್ಟದಾನೆಯ ಮಾವುತನು ತನ್ನ ಸರದಿ ಬಂದಂತೆ ತನ್ನ ಮನಸ್ಸಿನ ಸಂತೋಷಕ್ಕಾಗಿ ಹಾಡತೊಡಗಿದನು, ಅವನ ಹಾಡಿನ ಇಂಪಾದ ಧ್ವನಿಗೆ ಅಮೃತಮತಿ ತಿಳಿದೆದ್ದಳು, ಹಾಡನ್ನು ಕಿವಿಗೊಟ್ಟು ಕೇಳಿದಳು ಅದು ಅವಳ ಮನಸ್ಸನ್ನು ಮುಟ್ಟಿತು ಕೂಡಲೇ ಅವಳ ಮನಸ್ಸು ಅ ಹಾಡಿಗೆ, ಹಾಡುವವನ ಕಡೆಗೆ ಮೋಹಿತವಾಯಿತು. ಅಮೃತಮತಿಗೆ ಮಾವುತ ಮತ್ತು ಅವನ ಹಾಡಿಗೆ ಮೋಹಗೊಳ್ಳಲು ಹಿಂದಿನ ಭವಗಳಲ್ಲಿ ಮಾಡಿದ ಚಾರಿತ್ರ್ಯಮೋಹನೀಯ ಕರ್ಮದ ನೋ ಕಷಾಯದ ರತಿಕರ್ಮದ ಉದಯ ಕಾರಣವಾಗಿದೆ. ರತಿ ಎಂದರೆ ಈ ಕರ್ಮದ ಉದಯದಿಂದ ವ್ಯಕ್ತಿ, ವಸ್ತು, ವ್ಯವಸ್ಥೆಯ ಮೇಲೆ ಅತಿಯಾದ ಪ್ರೀತಿ ಆಸಕ್ತಿ ಹುಟ್ಟುತ್ತದೆ. ಅಮೃತಮತಿಗೆ ಈ ಕರ್ಮದ ಪ್ರಕಟಣೆಯಿಂದ ಮಾವುತನ ಮೇಲೆ ಪ್ರೀತಿ, ಆಸಕ್ತಿ, ಮೋಹ ಹೆಚ್ಚಾಗುತ್ತಲೇ ಹೋಗಿ ಅವಳ ಮನಸ್ಸು ಕದಡಿ ಹೋಯಿತು. ಅವಳಿಗೆ ಕಣ್ಣಲ್ಲೇ ಬೆಳಗಾಯಿತು, ಅವನನ್ನು ಹೇಗೆ ನೋಡಲಿ? ಹೇಗೆ ಕೂಡಲಿ? ಎಂಬ ಚಿಂತೆಯೇ ಅವಳನ್ನು ಕಾಡಿತು.

ಬೆಳಗಾದ ಕೂಡಲೆ ತನ್ನ ಗೆಳತಿಯನ್ನು ಕರೆದು ಅವಳೊಡನೆ ತನ್ನ ಮನಸ್ಸಿನ ಭಾವನೆಗಳನ್ನು ಹಂಚಿಕೊಂಡು ಮಾವುತನ ಬಳಿಗೆ ಕಳುಹಿಸಿಕೊಟ್ಟಳು. ಅವನನ್ನು ದೂರದಿಂದ ಕಂಡದ್ದೇ ತಡ ಅವಳ ಕಣ್ಣಿಗೆ ಮನಸ್ಸಿಗೆ ವಾಕರಿಕೆ ಬರುವಷ್ಟು ಕೆಟ್ಟ ಸ್ಥಿತಿಯಲ್ಲಿದ್ದ ಅಶುದ್ಧನಾಗಿದ್ದ ಅಲ್ಲಿ ನಿಲ್ಲಲಾರದೆ ಓಡಿ ಬಂದ ಗೆಳತಿಯನ್ನು "ನನ್ನ ನಲ್ಲ ಹೇಗಿದ್ದಾನೆ ಬೇಗ ಹೇಳು" (ಯಶೋಧರ ಚರಿತೆ, ಪು. ೩೭)ಎಂದು ಕೇಳಿದ ಅಮೃತಮತಿಗೆ ಗೆಳತಿ ಹೇಳುತ್ತಾಳೆ, "ಅವನು ಯಾವ ರೀತಿಯಲ್ಲಿದ್ದಾನೆಂದು ಹೋಲಿಸಿ ತೋರಿಸೋಣವೆಂದರೆ ಜಗತ್ತಿನಲ್ಲಿ ಅವನಂತೆ ಯಾರೂ ಇರುವುದಕ್ಕೆ ಸಾಧ್ಯವಿಲ್ಲ, ಅವನ ಕೂದಲು ಅಲ್ಲಲ್ಲಿ ಕಿತ್ತು ಹೋಗಿದೆ, ಹಣೆ ಹೊಂಡ ಬಿದ್ದಿದೆ, ಕಣ್ಣು ಕೊಳೆತು ಹೋಗಿದೆ, ಬಾಯಿ ಜೊಲ್ಲು ಸುರಿಸುತ್ತಲೇ ಇದೆ, ಚಪ್ಪಟೆಯಾದ ಮೂಗು, ಮುರುಟಿದ ಕಿವಿ, ಬಿರಿದ ಹಲ್ಲು, ಕೊರಳು ಕುಗ್ಗಿ ಎದೆ ಒಳನುಗ್ಗಿ ಬೆನ್ನು ಹೊರಚಾಚಿದೆ, ಹೊಟ್ಟೆ ಬಾತುಕೊಂಡಿದೆ, ಅತ್ಯಂತ ಕೆಟ್ಟ ವಾಸನೆ ಅವನ ದೇಹದಿಂದ ಸೋರುತ್ತಿತ್ತು, ಗೂನು ಬೆನ್ನು, ಕಾಲುಗಳು ಸೊಂಟ ಮುರಿದ ಕತ್ತೆಯ ಕಾಲನ್ನು ಮೀರಿಸುವಂತಿತ್ತು, ಮುದಿ ಕರಡಿಯ ಹಳೆಯ ಚರ್ಮದಂತೆ ಕಪ್ಪು ಕರಿಯಾಗಿದೆ ಅವನ ದೇಹದ ಬಣ್ಣ, ಒರಟೊರಟಾದ ಶರೀರ, ಅಂಕುಡೊಂಕಾಗಿ ಅಷ್ಟವಕ್ರವಾಗಿದೆ ಒಟ್ಟಾರೆ ಅವನ ದೇಹ ಒಣಗಿ ಹೋದ ಮರದ ಕೊರಡಿನಂತಿದೆ" (ಯಶೋಧರ ಚರಿತೆ, ಪು. ೩೭) ಎಂದು ಗೆಳತಿ ವಿವರಿಸುತ್ತಾಳೆ.

ಇಲ್ಲಿ ಪ್ರಮುಖವಾಗಿ ಎರಡು ವೈರುಧ್ಯದ ಸಂಗತಿಗಳನ್ನು ಗಮನಿಸಬಹುದು ರಾಜನಾದ ಯಶೋಧರ ಅತ್ಯಂತ ಸುಂದರವಾದ, ಸದೃಢವಾದ ದೇಹವನ್ನು ಪಡೆದಿದ್ದಾನೆ, ಉಚ್ಚಕುಲದಲ್ಲಿ ಜನಿಸಿದ್ದಾನೆ, ಸುಖ ಭೋಗವನ್ನು ಅನುಭವಿಸುತ್ತಿದ್ದಾನೆ. ಇತ್ತಕಡೆ ಮಾವಟಿಗ ಅತ್ಯಂತ ಕೆಟ್ಟದಾದ ವಕ್ರವಾದ ದೇಹವನ್ನು ಪಡೆದಿದ್ದಾನೆ ನೀಚ ಗೋತ್ರದಲ್ಲಿ ಜನಿಸಿದ್ದಾನೆ, ಕಷ್ಟದ ಜೀವನವನ್ನು ನಡೆಸುತ್ತಿದ್ದಾನೆ. ಇನ್ನೊಂದು ಕಡೆ ಎಲ್ಲಾ ರೀತಿಯಲ್ಲೂ ಸಮರ್ಥನಾದ ಗಂಡ ಯಶೋಧರನನ್ನು ಬಿಟ್ಟು ಅಮೃತಮತಿ ಮಾವಟಿಗನ ಸಖ್ಯವನ್ನು ಬಯಸುತ್ತಿದ್ದಾಳೆ ಇವೆಲ್ಲದಕ್ಕೂ ಅವರವರ ಆತ್ಮನಿಗೆ ಅಂಟಿದ ಅಷ್ಟಕರ್ಮಗಳ ಉತ್ತರಭೇದಗಳ ಉದಯವೇ ಕಾರಣವಾಗಿದೆ.

ಮಾವಟಿಗನಿಗೆ ಮನುಷ್ಯಗತಿ ಮತ್ತು ಪಂಚೇಂದ್ರಿಯ ಜಾತಿ ದೊರಕಿರುವುದು ಶುಭನಾಮ ಕರ್ಮದಿಂದಲಾದರು, ಸ್ಥಾನನಿರ್ಮಾಣ ಮತ್ತು ಪ್ರಮಾಣ ನಿರ್ಮಾಣಗಳ ಅಶುಭ ನಾಮಕರ್ಮದಿಂದಾಗಿ ದೇಹದ ಬಹುತೇಕ ಅಂಗಗಳು ಚಪ್ಪಟೆ ಮೂಗು, ಮುರುಟಿದ ಕಿವಿ, ಬಿರಿದ ಹಲ್ಲು, ಹೊಂಡಬಿದ್ದ ಹಣೆ, ಒಳನುಗ್ಗಿದ ಬೆನ್ನು, ಉಬ್ಬಿಕೊಂಡ ಹೊಟ್ಟೆ, ಕುಗ್ಗಿದ ಕೊರಳು, ಕಿತ್ತುಹೋದ ಕೂದಲು ಇವೆಲ್ಲವೂ ಅಯಾಯ ಸ್ಥಾನದಲ್ಲಿ ವ್ಯವಸ್ಥಿತವಾಗಿ ನಿರ್ಮಾಣವಾಗಿಲ್ಲ ಹಾಗೂ ಅದರ ಪ್ರಮಾಣ ಯಾವುದು ಎಷ್ಟಿರಬೇಕು ಅಷ್ಟರ ಪ್ರಮಾಣದಲ್ಲಿ ನಿರ್ಮಾಣವಾಗಿಲ್ಲ ಇದಕ್ಕೆಲ್ಲಾ ಅಶುಭ ನಾಮಕರ್ಮದ ಭೇದಗಳೇ ಕಾರಣವಾಗಿದೆ. ಹಾಗೆಯೇ ಮಾವಟಿಗನ ಶರೀರವು ಅಂಕುಡೊಂಕಾಗಿರಲು ಕುಬ್ಜಕ ಸಂಸ್ಥಾನ ಅಶುಭ ನಾಮಕರ್ಮ ಕಾರಣವಾದರೆ, ಗಿಡ್ಡ(ಕುಳ್ಳ) ಶರೀರ ಹೊಂದಲು ವಾಮನ ಸಂಸ್ಥಾನ ನಾಮಕರ್ಮ ಕಾರಣವಾಗಿದೆ ಹಾಗೂ ಇವನ ದೇಹದ ಅಂಗೋಪಾಂಗಗಳು, ಅವಯವಗಳು ಒಂದು ಸಣ್ಣದು, ಒಂದು ದೊಡ್ಡದು, ಒಂದು ಗಿಡ್ಡ, ಒಂದು ಉದ್ದ ಹೀಗೆ ಅಸಮರ್ಪಕವಾಗಿರಲು ಹುಂಡಕ ಸಂಸ್ಥಾನ ನಾಮಕರ್ಮವೇ ಕಾರಣ.

ಶರೀರ ಒಣಗಿರಲು ರುಕ್ಷ ನಾಮಕರ್ಮ ಕಾರಣ, ದೇಹ ಕೆಟ್ಟವಾಸನೆ ಬರಲು ದುರ್ಗಂಧ ನಾಮ ಕರ್ಮ ಕಾರಣ, ದೇಹ ಅತ್ಯಂತ ಕಪ್ಪಾಗಿರಲು ನಾಮಕರ್ಮದ ಐದು ವರ್ಣಭೇದಗಳಲ್ಲಿ ಕೃಷ್ಣ ನಾಮಕರ್ಮ ಕಾರಣವಾಗಿದೆ, ಶರೀರ ವಿಕೃತವಾಗಿ ನಿರ್ಮಾಣವಾಗಲು ಉಪಘಾತ ನಾಮಕರ್ಮ ಕಾರಣ, ಈ ಕರ್ಮದಿಂದ ಜೀವಿ ತನ್ನ ದೇಹದಿಂದ ತಾನೇ ಕಷ್ಟ ಅನುಭವಿಸುತ್ತಾನೆ. ಮಾವಟಿಗನ ಸ್ವರ ಇಂಪಾಗಿತ್ತು ಇದು ಶುಭನಾಮ ಸುಸ್ವರಕರ್ಮದ ಫಲವಾಗಿದೆ.

ಈ ಎಲ್ಲಾ ವಿಲಕ್ಷಣ ವಕ್ರತೆಗಳನ್ನು ಸ್ನೇಹಿತೆ ಹೇಳಿದಾಕ್ಷಣ ಅಸಾತವೇದನೀಯ ಕರ್ಮ ಪ್ರಕಟಗೊಂಡು ಅಮೃತಮತಿಯ ಗಂಟಲು ಗರಗರ ಶಬ್ಧ ಮಾಡಿತು, ಕಣ್ಣಲ್ಲಿ ನೀರು ತುಂಬಿಕೊಂಡಿತು, ಎದೆ ನಡುಗಿತು. ಬಳಿಕ ಮೋಹನೀಯಕರ್ಮ ಪಾಶದಲ್ಲಿರುವ ಅಮೃತಮತಿ ಮಾತನಾಡಲಾರಂಭಿಸಿದಳು "ಕಸ್ತೂರಿಯ ಬಣ್ಣ ಕಪ್ಪು, ಅದನ್ನು ಬಣ್ಣದಿಂದಾಗಿ ಕಡೆಗಣಿಸುತ್ತಾರೆಯೇ? ಗಂಟುಗಂಟಾಗಿದೆಯೆಂದು ಗಂಧದ ಕೊರಡನ್ನು ತಿರಸ್ಕರಿಸುತ್ತಾರಾ? ನಾನು ಅವರ ಮನಸ್ಸನ್ನು ಮೆಚ್ಚಿದ್ದೆ ಹೊರತು ದೇಹವನ್ನಲ್ಲ. ಹಾಗಾಗಿ ನನಗೆ ಅವನೇ ಚಂದ್ರ, ಇಂದ್ರ ಎನ್ನುತ್ತಾ" (ಯಶೋಧರ ಚರಿತೆ, ಪು. ೩೮)ದೂತಿಗೆ ಲಂಚವನ್ನು ಕೊಟ್ಟು ತನ್ನ ವಶಮಾಡಿಕೊಂಡಳು. ದೂತಿ ಇಬ್ಬರನ್ನು ಒಂದುಗೂಡಿಸಿದಳು. ನಂತರದಲ್ಲಿ ಹಗಲು ಇರುಳೆನ್ನದೆ ಬಿಡುವಿದ್ದಾಗಲೆಲ್ಲಾ ಆತನೊಡನಾಟದಲ್ಲಿ ಕಾಲ ಕಳೆಯಲು ತೊಡಗಿದಳು.

ಸೌಂದರ್ಯದ ಅದಿದೇವತೆಯಂತಿದ್ದ ಅಮೃತಮತಿಗೆ ಅಷ್ಟಾವಂಕನ ಒಡನಾಟವೇ ಸವಿಕಂಡಿತು. ಇದು ಅವಳ ಮೋಹನೀಯ ಕರ್ಮವಲ್ಲದೆ ಮತ್ತಿನ್ನೇನು?! ಯಶೋಧರನಲ್ಲಿ ಅವನ ಮನಸ್ಸು ಮುರುಟಿತು. ಎಲ್ಲಾ ವಿಧದಲ್ಲೂ ಸಮರ್ಥನಾದ ಯಶೋಧರನ ಬಗ್ಗೆ ನಿರಾಸಕ್ತಿ ಉಂಟಾಗಲು ಹಾಗೂ ಅಷ್ಟಾವಂಕ ಮಾವಟಿಗನ ಮೇಲೆ ಆಸೆ ಉಂಟಾಗಲು ಕಾರಣ ಅಮೃತಮತಿಯಲ್ಲಿ ಉದಯವಾದ ಮೋಹನೀಯ ಕರ್ಮ. ಈ ಕರ್ಮದ ಉದಯದಿಂದ ಶರೀರ ಮೊದಲಾದ ಪರವಸ್ತುಗಳು ತನ್ನವು ಎಂದು ತಿಳಿದು ಅವುಗಳ ಮೇಲೆ ಮಮಕಾರ ಉಂಟುಮಾಡುವ ಕರ್ಮ ಇದರಲ್ಲಿ ಎರಡು ವಿಧದ ದರ್ಶನ ಮೋಹನೀಯ ಕರ್ಮ ಮತ್ತು ಚಾರಿತ್ರ್ಯ ಮೋಹನೀಯ ಕರ್ಮ. ಅಮೃತಮತಿಯಲ್ಲಿ ಈಗ ಉದಯಕ್ಕೆ ಬಂದಿರುವುದು ಚಾರಿತ್ರ್ಯ ಮೋಹನೀಯ ಕರ್ಮ ಇದರಲ್ಲಿ ಇಪ್ಪತ್ತೈದು ಒಳಭೇದಗಳಿವೆ, ಹದಿನಾರು ಕಷಾಯ ಹಾಗೂ ಒಂಭತ್ತು ನೋ ಕಷಾಯವಾಗಿದೆ.

ಅಮೃತಮತಿಗೆ ಮಾವಟಿಗನ ಮೇಲೆ ಮೋಹ ಉಂಟಾಗಲು ರತಿ ನಾಮಕರ್ಮ ಕಾರಣವಾದರೆ, ಯಶೋಧರನ ಮೇಲೆ ನಿರಾಸಕ್ತಿ ಉಂಟಾಗಲು ಜಿಗುಪ್ಸಾ ಕರ್ಮವೇ ಕಾರಣ ಹಾಗೂ ಮಾವಟಿಗನೊಂದಿಗೆ ರಮಿಸುವ ಮೋಹವುಂಟಾಗಲು ಸ್ತ್ರೀವೇದ ನಾಮ ಕರ್ಮ ಕಾರಣವಾಗಿದೆ. ಈ ಎಲ್ಲಾ ಕರ್ಮಗಳ ಉದಯದಿಂದ ಅಮೃತಮತಿ ತನ್ನ ಬದುಕಿನ ಹೆಜ್ಜೆಯನ್ನು ತಪ್ಪಿದ್ದಾಳೆ, ಅಧರ್ಮದ ದಾರಿಯಲ್ಲಿ ಸಾಗುತ್ತಿದ್ದಾಳೆ. ಅಮೃತಮತಿಯ ಬಗ್ಗೆ ಸಂಶಯಗೊಂಡ ಯಶೋಧರ ಒಂದು ದಿನ ರಾತ್ರಿ ನಿದ್ರೆಯಲ್ಲಿ ಮೈಮರೆತವನಂತೆ ನಟಿಸುತ್ತಾನೆ. ಇದನ್ನೆ ಕಾಯುತ್ತಿದ್ದ ಅಮೃತಮತಿ ಯಶೋಧರನಿಂದ ಬಿಡಿಸಿಕೊಂಡು ಗಜಶಾಲೆಗೆ ಬಂದು ಮಾವಟಿಗನ ಸಖ್ಯಕ್ಕೆ ಸಾರುತ್ತಾಳೆ. ತಡವಾಗಿ ಬಂದ ಅಮೃತಮತಿಯನ್ನು ನಾನಾ ರೀತಿಯಲ್ಲಿ ದೈಹಿಕವಾಗಿ ಮಾನಸಿಕವಾಗಿ ಹಿಂಸಿಸುತ್ತಾನೆ, ಎಲ್ಲವನ್ನು ಸಹಿಸಿಕೊಂಡ ಅಮೃತಮತಿ ಮತ್ತೆ ಅವನಲ್ಲಿ ಅನುರಕ್ತಳಾಗುತ್ತಾಳೆ.

ಇದು ಅಮೃತಮತಿಯ ಮೋಹನೀಯ ಕರ್ಮದ ಪರಾಕಾಷ್ಠೆಯನ್ನು ಬಿಂಬಿಸುತ್ತದೆ. ಇತ್ತ ಅಮೃತಮತಿಯನ್ನು ಹಿಂಬಾಲಿಸಿಕೊಂಡು ಬಂದ ಯಶೋಧರ ಇವರ ರತಿ ಕ್ರೀಡೆಯನ್ನು ಕಂಡು ಕೊಪೋದ್ರಿಕ್ತನಾಗಿ ಖಡ್ಗವನ್ನು ಎತ್ತಿದ ಅಷ್ಟರಲ್ಲಿ ಮನಸ್ಸನ್ನು ಹತೋಟಿಗೆ ತಂದು ಸಂಯಮ ಧಾರಣೆ ಮಾಡಿ ಬೇಡ ಎಂದು ಅವನ ಮನಸ್ಸು ಹೇಸಿಕೊಂಡಿತು, ಈ ಕ್ಷುದ್ರನನ್ನು ಇರಿದರೆ ನನಗೆ ಅಪಕೀರ್ತಿ ಬಂದಿತು, ಅಮೃತಮತಿಯನ್ನು ಕತ್ತರಿಸಿ ಬಿಸಾಕಿದರೆ ಅವಳ ಆಸೆ ಕೊನೆಗೊಳ್ಳುದಿಲ್ಲ, ಹಾಗಂತ ಇವರನ್ನು ಹೀಗೆ ಬಿಟ್ಟುಬಿಡುವುದೆ? ಎಂದೆಲ್ಲ ಯೋಚಿಸಿ ತಾಳ್ಮೆಯಿಂದ ತನ್ನ ಕೋಣೆಯೆಡೆಗೆ ನಡೆದನು.

ಯಶೋಧರ ಅವರ ಸಂಗವನ್ನು ಕಂಡು ಬೇಸರಿಸಿದ್ದು, ದುಃಖ ಪಟ್ಟು ಮರುಗಿದ್ದು ವೇದನೀಯ ಕರ್ಮದ ಭೇದವಾದ ಅಸಾತವೇದನೀಯ ಕರ್ಮದ ಉದಯದ ಕಾರಣದಿಂದ. ಮರುದಿನ ಅಮೃತಮತಿಗೆ ಹಿಂದಿನ ದಿನದ ಹೇಯಕೃತ್ಯಗಳನ್ನು ಕೊಂಕು ಮಾತುಗಳಲ್ಲಿ ತಿಳಿಸಿದಾಗ ಅಮೃತಮತಿಗೆ ತನ್ನ ಮತ್ತು ಮಾವಟಿಗನ ಸಂಬಂಧ ಯಶೋಧರನಿಗೆ ತಿಳಿದಿರುವುದು ಸ್ಪಷ್ಟವಾಗುತ್ತದೆ. ಯಶೋಧರ ತನ್ನ ಮನಸ್ಸಿನ ವೇದನೆಯನ್ನು ತಾಯಿ ಚಂದ್ರಮತಿ ಬಳಿ ತಿಳಿಸಲು ಬರುತ್ತಾನೆ. ಕೈ ಹಿಡಿದವಳ ದುರ್ವರ್ತನೆಯನ್ನು ನೇರವಾಗಿ ಹೇಳಲಾಗದೆ ಒಂದು ಕನಸಿನ ರೂಪದಲ್ಲಿ ಹೇಳಿದನು. ಇದನ್ನು ಕೇಳಿ ತಲ್ಲಣಗೊಂಡ ಚಂದ್ರಮತಿ ಮತಿ, ಶ್ರುತ ಜ್ಞಾನಾವರಣೀಯ ಕರ್ಮದ ಉದಯದಿಂದ ಅಜ್ಞಾನಕ್ಕೆ ಒಳಗಾಗಿ ಚಂಡಿಕಾದೇವಿಗೆ ಒಂದು ಕುರಿಯನ್ನು ನಿನ್ನ ಖಡ್ಗದಿಂದ ಕತ್ತರಿಸಿ ಅರ್ಪಿಸಿದರೆ ದೇವಿ ಕಷ್ಟವನ್ನು ದೂರಮಾಡುತ್ತಾಳೆಂದು ತಿಳಿಸುತ್ತಾಳೆ. ತಾಯಿಯ ಮಾತನ್ನು ಕೇಳಿದ ಯಶೋಧರ ಶಾಂತಂ ಪಾಪಂ ಎನ್ನುತ್ತ ಕಿವಿಮುಚ್ಚಿಕೊಂಡನು ಯಾಕೆಂದರೆ ಪ್ರಾಣಿ ಬಲಿ ಎಂಬುವುದು ಅತ್ಯಂತ ಘೋರವಾದ ಪಾಪ ಕರ್ಮವಾಗಿದೆ ಇದನ್ನು ಕೈಗೊಂಡರೆ ನರಕಾಯು ಕರ್ಮ ಬಂಧವಾಗಿ ಮುಂದಿನ ಭವದಲ್ಲಿ ನರಕಗತಿಯಲ್ಲಿ ಜನಿಸಬೇಕಾಗುತ್ತದೆ ಎಂದು ತಿಳಿದಿದ್ದ ಯಶೋಧರ ಅದನ್ನು ಒಪ್ಪೋದಿಲ್ಲ ಕೊನೆಗೆ ಚಂದ್ರಮತಿ ಒಂದು ಹಿಟ್ಟಿನ ಕೋಳಿಯನ್ನಾದರು ಬಲಿಕೊಡಬೇಕೆಂದು ಒತ್ತಾಯಿಸಿದಾಗ ಅದಕ್ಕೆ ಒಪ್ಪಿದ ಯಶೋಧರ ಒಂದು ಸುಂದರವಾದ ಹಿಟ್ಟಿನ ಕೋಳಿಯನ್ನು ಬಲಿಗೆ ತಯಾರು ಮಾಡಿಸಿದ, ಇದು ಹಿಂಸೆಗಳಲ್ಲಿ ಅತ್ಯಂತ ತೀಕ್ಷ್ಣವಾದ ಸಂಕಲ್ಪ ಹಿಂಸೆಯಾಗಿದೆ, ಇದರಿಂದ ನರಕಾಯು, ನರಕಗತಿ, ಅಂತರಾಯ ಕರ್ಮಗಳು ಬಂಧವಾಗುತ್ತದೆ.

ಅ ಹಿಟ್ಟಿನ ಹುಂಜದ ಸೌಂದರ್ಯವನ್ನು ಕಂಡ ಒಂದು ಪಿಶಾಚಿ ಅದರೊಳಗೆ ಸೇರಿಕೊಂಡಿತು ಅಷ್ಟರಲ್ಲಿ ತಾಯಿಯ ಅಣತಿಯಂತೆ ಹಿಟ್ಟಿನ ಕೋಳಿಯನ್ನು ತನ್ನ ಖಡ್ಗದಿಂದ ಕಡಿದಿಕ್ಕಿದನು, ತಕ್ಷಣವೇ ಅ ಕೋಳಿ ಕೊಕ್ಕೋಕ್ಕೋ ಕೂಗಿತು. ಕೋಳಿಯ ಶರೀರವು ಸ್ವಲ್ಪ ದೂರಕ್ಕೆ ಹಾರಿತು ರಾಜನ ಕೈಯಿಂದ ಖಡ್ಗ ನೆಲಕ್ಕುರುಳಿತು. ಅಯ್ಯೋ ಕನಸೆಂದು ನಾನೇಕೆ ಸುಳ್ಳು ಹೇಳಿದೆ? ಸುಳ್ಳು ಪಂಚ ಪಾಪಗಳಲ್ಲಿ ಒಂದು ಸುಳ್ಳು ಹೇಳುವುದರಿಂದ ಜ್ಞಾನಾವರಣೀಯ ಪಾಪಕರ್ಮ ಆತ್ಮನಿಗೆ ಬಂಧವಾಗುತ್ತದೆ ಇದನ್ನು ಯಶೋಧರ ಮುಂದಿನ ಭವದಲ್ಲಿ ಅನುಭವಿಸುತ್ತಾನೆ. ನನ್ನ ತಾಯಿ ಯಾಕೆ ನನ್ನಲ್ಲಿ ಬಲಿ ಕೊಡಿಸಿದಳು? ನನ್ನಿಂದ ಮಹಾಪರಾಧವಾಯಿತು ಎಂದು ಪಶ್ಚಾತ್ತಾಪ ಪಡುತ್ತಾನೆ. ಪಶ್ಚಾತ್ತಾಪದ ಕಾರಣದಿಂದ ಆತ್ಮನಿಗೆ ಬಂಧವಾಗುವ ಪಾಪದ ಪರಿಣಾಮ ಕಡಿಮೆಯಾಗುತ್ತದೆ.

ಹಿಟ್ಟಿನ ಕೋಳಿಯನ್ನು ಬಲಿಕೊಡುವಾಗ ಅದರ ಒಳಗಿದ್ದ ಪಿಶಾಚಿ ಸಾಯುತ್ತದೆ. ಇದರಿಂದ ಯಶೋಧರನಿಗೆ ತಿರ್ಯಂಚಗತಿ, ಅಸಾತವೇದನೀಯ ಹಾಗೂ ತಿರ್ಯಂಚ ನಾಮ ಕರ್ಮ ಬಂಧವಾಗುತ್ತದೆ, ಮುಂದಿನ ಭವದಲ್ಲಿ ಪ್ರಾಣಿ ಅಥವಾ ಪಕ್ಷಿ, ಕ್ರಿಮಿ, ಕೀಟವಾಗಿ ಜನಿಸಬಹುದು. ಈ ಘಟನೆಗಳಿಂದ ಸಂಕಟ, ದುಃಖ ಉದ್ವೇಗಕ್ಕೆ ಒಳಪಟ್ಟ ಯಶೋಧರ ರಾಜ್ಯಭಾರದ ಹೊರೆಯನ್ನು ತನ್ನ

ಮಗ ಯಶೋಮತಿಗೆ ನೀಡಿ ಸರ್ವಸಂಗ ಪರಿತ್ಯಾಗ ಮಾಡಿ ತಪಸ್ಸಿಗೆ ಹೊರಡಲು ನಿರ್ಧರಿಸಿ ಹೊರಡುತ್ತಾರೆ.

ಇದನ್ನು ತಿಳಿದ ಅಮೃತಮತಿ ಉಪಾಯದಿಂದ ಗಂಡ ಮತ್ತು ಅತ್ತೆಯನ್ನು ಮನವೊಲಿಸಿ ಊಟಕ್ಕೆ ಕರೆದು ವಿಷದ ಲಡ್ಡುಗೆಯನ್ನು ನೀಡಿ ಅವರನ್ನು ಸಾಯಿಸುತ್ತಾಳೆ. ಇದರ ಪರಿಣಾಮ ನರಕಾಯು ಕರ್ಮ, ಅಶುಭ ನಾಮಕರ್ಮ ಬಂಧವಾಗಿ ಮುಂದಿನ ಭವದಲ್ಲಿ ಅತ್ಯಂತ ನಿಕೃಷ್ಟ ದೇಹವನ್ನು ಹೊಂದಿ ನರಕ ಗತಿಯಲ್ಲಿ ಜನಿಸುತ್ತಾಳೆ. ವಿಷದ ಲಡ್ಡುಗೆ ತಿಂದು ಸತ್ತ ಯಶೋಧರ ತನ್ನ ಹಿಂದಿನ ಭವದ ತಿರ್ಯಂಚ ನಾಮಕರ್ಮದ ಬಂಧದಿಂದಾಗಿ ವಿಂಧ್ಯಾ ಪರ್ವತದಲ್ಲಿ ನವಿಲಾಗಿ ಜನಿಸಿದನು. ಜನಿಸಿದ ಕೆಲವೇ ದಿನಗಳಲ್ಲಿ ಬೇಡನೊಬ್ಬ ಬಂದು ಅದರ ತಾಯಿಯನ್ನು ಓಡಿಸಿ ಮರಿಯನ್ನು ತಂದು ಸಾಕಲು ಹೆಂಡತಿಗೆ ಒಪ್ಪಿಸಿದನು.

ನವಿಲು ತಾಯಿಯಿಂದ ದೂರವಾದ ದುಃಖ ಹಾಗೂ ಬೇಡನಿಂದ ಸೆರೆಯಾದ ದುಃಖ ಎರಡಕ್ಕೂ ಅಸಾತವೇದನೀಯ ಕರ್ಮದ ಉದಯವೇ ಕಾರಣವಾಗಿದೆ. ಚಂದ್ರಮತಿ ಬೇಟೆ ನಾಯಿಯ ಮರಿಯಾಗಿ ಜನಿಸುತ್ತದೆ ಇದು ಕೂಡ ತಿರ್ಯಂಚ ನಾಮಕರ್ಮದ ಬಂಧವೇ ಕಾರಣವಾಗಿದೆ. ನವಿಲು ಹಾಗೂ ಬೇಟೆ ನಾಯಿಯನ್ನು ಬೇರೆ ಬೇರೆಯಾಗಿ ರಾಜ ಯಶೋಮತಿಗೆ ಕಾಣಿಕೆಯಾಗಿ ನೀಡುತ್ತಾರೆ. ಎಂಥ ವಿಪರ್ಯಾಸ ಒಂದು ಕಾಲದಲ್ಲಿ ತಮಗೆ ಅಂಜುತ್ತಿದ್ದವರಿಗೆ ತಾವು ಅಂಜುವ ಸಂದರ್ಭ, ತಮ್ಮ ಎಂಜಲನ್ನು ತಿನ್ನುತ್ತಿದ್ದವರ ಎಂಜಲನ್ನು ಇವತ್ತು ತಾವೇ ತಿನ್ನಬೇಕಾಗಿದೆ ಇದೇ ಕರ್ಮ ಫಲ.

ಒಮ್ಮೆ ಅಮೃತಮತಿಯ ಶಯ್ಯಾಗಾರದಲ್ಲಿ ನವಿಲು ನಲಿಯುತ್ತಿರುವ ಸಂದರ್ಭದಲ್ಲಿ ಅಮೃತಮತಿ ಅಷ್ಟಾವಂಕ ಸಮಾಗಮಕ್ಕೆ ಸಿದ್ಧರಾದಾಗ ನವಿಲಿಗೆ ಪೂರ್ವ ಭವದ ನೆನಪಾಗಿ ರೋಷದಿಂದ ಅಷ್ಟಾವಂಕನ ಕಣ್ಣನ್ನು ಕುಕ್ಕಿತು ಅದನ್ನು ಓಡಿಸಿದಾಗ ಉಪ್ಪರಿಗೆಯಿಂದ ಕೆಳಕ್ಕೆ ಬಿದ್ದು ನವಿಲು ಸತ್ತಿತು. ಕೆಳಕ್ಕೆ ಬಿದ್ದ ನವಿಲಿನ ಕುತ್ತಿಗೆಯನ್ನು ನಾಯಿ ಹಿಡಿದಿರುವುದನ್ನು ಗಮನಿಸಿದ ಯಶೋಮತಿ ನವಿಲನ್ನು ನಾಯಿಯೇ ಸಾಯಿಸಿದೆ ಎಂದು ಮಣೆಯಿಂದ ನಾಯಿಯ ತಲೆಗೆ ಹೊಡೆದಾಗ ನಾಯಿಯೂ ಸತ್ತಿತು. ನಾಯಿ ಮತ್ತು ನವಿಲು ಸತ್ತುದನ್ನು ಕಂಡಾಗ ಯಶೋಮತಿಗೆ ತಂದೆ ತಾಯಿಗಳು ಸತ್ತರೆ ಆಗುವಷ್ಟು ದುಃಖ ಅನುಭವಿಸುತ್ತಾನೆ ಇದು ಜನ್ಮಾಂತರದ ವ್ಯಾಮೋಹ ಯಶೋಮತಿಗೆ ಮೋಹನೀಯ ಕರ್ಮದ ಉದಯದಿಂದ ಅ ಭಾವ ಉಂಟಾಗಿದೆ.

ಸತ್ತ ನಾಯಿ ವಿಂಧ್ಯ ಪರ್ವತದಲ್ಲಿ ತಿರ್ಯಂಚಗತಿಯಲ್ಲಿ ಹಾವಾಗಿ ಹುಟ್ಟಿತು, ನವಿಲು ಅಲ್ಲಿಯೇ ಮುಳ್ಳು ಹಂದಿಯಾಗಿ ಜನ್ಮ ಪಡೆಯಿತು. ಈ ಮುಳ್ಳುಹಂದಿ ಹಗೆಯಿಂದ ಹಾವನ್ನು ಕೊಂದಿದೆ. ಹಂದಿಯನ್ನು ಹುಲಿ ತಿಂದಿತು. ಮುಳ್ಳು ಹಂದಿ ಸಿಂಪಾನದಿಯಲ್ಲಿ ಮೀನಾಗಿ ಹುಟ್ಟಿತು. ಹಾವು ಅದೇ ಹೊಳೆಯಲ್ಲಿ ಮೊಸಳೆಯ ಜನ್ಮವನ್ನು ಪಡೆಯಿತು. ಈ ಮೊಸಳೆಯನ್ನು ಹೊರಕ್ಕೆಳಸಿ ಚಿತ್ರಹಿಂಸೆಕೊಟ್ಟು ಕೊಲ್ಲಲಾಯಿತು. ಹೀಗೆ ಸತ್ತು ಹೋದ ಮೊಸಳೆ ಅದೇ ಊರಿನ ಹೊಲಗೇರಿಯಲ್ಲಿ ಒಂದು ಆಡಿನಮರಿಯಾಗಿ ಹುಟ್ಟಿತು. ಹಂದಿಯಾಗಿದ್ದುದು ಮೀನಾಗಿ ಹುಟ್ಟಿ ಅ ಮೀನನ್ನು ಶ್ರಾದ್ಧಕ್ಕೆ ಅಡುಗೆ ಮಾಡಿಸಿದನು. ಚಂದ್ರಮತಿ ಈಗಾಗಲೇ ಆಡಾಗಿ ಜನಿಸಿತ್ತು.

ಈ ಮೀನು ಅ ಆಡಿನ ಗರ್ಭದಲ್ಲಿ ಹೋತವಾಗಿ ಹುಟ್ಟಿ ಬೆಳೆದು ಪ್ರಾಯಕ್ಕೆ ಬಂದಾಗ ಸೊಕ್ಕಿ ಬೆದೆಗೆ ಬಂದ ತಾಯಿಗೆ ಹತ್ತಿತು. ಆಗ ಇನ್ನೊಂದು ಹೋತ ಬಂದು ಇದಕ್ಕೆ ಹಾದು ಇದು ಸತ್ತಿತು. ಸತ್ತ ಆಡು ತಾಯಿಯ ಬಸಿರನ್ನೇ ಸೇರಿ ಬೆಳೆಯಿತು. ಬೇಟೆಗೆ ಹೋಗಿದ್ದ ಯಶೋಮತಿಗೆ ಯಾವುದೇ ಪ್ರಾಣಿ ಸಿಗಲಿಲ್ಲವೆಂದು ದಾರಿಯಲ್ಲಿ ಕಂಡ ಈ ಗರ್ಭಿಣಿ ಆಡನ್ನೇ ಬಾಣ ಬಿಟ್ಟು ಕೊಂದನು. ಆದರೆ ಆಡಿನ ಮರಿ ಸಾಯಲಿಲ್ಲ ಅದನ್ನು ಹೊಲೆಯರಿಗೆ ಸಾಕಲು ನೀಡಿದನು. ಮುಂದೊಂದು ದಿನ ನಾಯಿ ಮುಟ್ಟಿದ ಮಾಂಸವನ್ನು ಶುದ್ಧ ಮಾಡಲು ವೇದದಲ್ಲಿ ಹೇಳಿದ ಪ್ರಕಾರ ಆಡಿನ ರಜಸ್ಸನ್ನು ಸೇರಿಸಲು ಒಂದು ಆಡನ್ನು ಕೊಲ್ಲುತ್ತಾರೆ, ಅದರ ರಜಸ್ಸಿನಿಂದ ಶುದ್ಧ ಮಾಡಿದ ಮಾಂಸವನ್ನು ಬ್ರಾಹ್ಮಣರು ತಿಂದು ತೃಪ್ತರಾಗಿ ನಿಮ್ಮ ತಂದೆ ಯಶೋಧರ, ತಾಯಿ ಯಶೋಮತಿ ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಿದ್ದಾರೆಂದು ತಿಳಿಸಿದರು.

ಯಶೋಮತಿಯ ಬಾಣದಿಂದ ಸತ್ತಿದ್ದ ಆಡು ಸತ್ತು ಅದರ ಆತ್ಮ ತಿರ್ಯಂಚಗತಿಯಲ್ಲಿ ಕೋಣನ ದೇಹವನ್ನು ಪಡೆಯಿತು. ಈ ಕೋಣ ಒಂದು ದಿನ ಸಿಂಪಾ ನದಿಯಲ್ಲಿ ಬಾಯಾರಿಕೆಯಿಂದ ಅರ್ಧ ಮುಳುಗಿ ಮಲಗಿರಲು ಅಲ್ಲಿಗೆ ಅರಸನ ನಾಯಿ ನೀರು ಕುಡಿಯಲು ಬಂದಾಗ ಅದನ್ನು ತಿವಿದು ಕೊಂದಿತು. ಇದನ್ನು ತಿಳಿದ ಯಶೋಮತಿ ಅದನ್ನು ಕೊಂದು ಬೇಯಿಸಿ ಅದರ ಮಾಂಸವನ್ನು ಅಮೃತಮತಿಗೆ ಕಳುಹಿಸಿದ. ಅ ಸಂದರ್ಭದಲ್ಲಿ ಅಸಾತವೇದನೀಯ ಕರ್ಮೋದಯದಿಂದ ಅಮೃತಮತಿಯ ದೇಹ ಕೀವು ತುಂಬಿ ವಾಸನೆಯಿಂದ ಕೂಡಿತ್ತು, ಅವಳಿಗೆ ಕುಷ್ಠರೋಗ ಅಂಟಿ ದೇಹ ಕೃಶವಾಗಿತ್ತು. ಕೋಣನ ಮಾಂಸವನ್ನು ತಿಂದು ಅದರ ಸವಿಯುಂಡ ಅಮೃತಮತಿ ಅಡಿಗೆ ಮನೆಯ ಪಕ್ಕದಲ್ಲಿ ಕಟ್ಟಿದ್ದ ಹೋತವನ್ನು ತಿನ್ನುವ ಉದ್ದೇಶದಿಂದ ನರಕಾಯು, ನರಕಗತಿ, ಅಸಾತವೇದನೀಯ ಕರ್ಮ ಆತ್ಮನಿಗೆ ಬಂಧವಾಗುವಂತೆ ಕೊಂದಳು, ಈಗ ಸತ್ತ ಹೋತ ಯಶೋಧರನ ಭವವೇ ಆಗಿತ್ತು. ಈಗಾಗಲೇ ಸತ್ತ ಕೋಣ(ಚಂದ್ರಮತಿ) ಹಾಗೂ ಹೋತ(ಯಶೋಧರ), ಹೊಲೆಗೇರಿಯ ಮಾದರ ಮನೆಯಲ್ಲಿ ತಿರ್ಯಂಚಗತಿ ನಾಮಕರ್ಮದ ಪ್ರಭಾವದಿಂದ ಕೋಳಿಗಳಾಗಿ ಜನ್ಮ ತಾಳಿದವು ಅತ್ಯಾಕರ್ಷಕವಾಗಿ ಬೆಳೆದ ಕೋಳಿಗಳನ್ನು ಮಾದರ ರಾಜನಿಗೊಪ್ಪಿಸಿದನು.

ರಾಜ ಯಶೋಮತಿ ಅವುಗಳನ್ನು ಚಂಡಕರ್ಮನಿಗೆ ಕೊಟ್ಟು ಸಾಕುವಂತೆ ತಿಳಿಸಿದನು. ಅವುಗಳ ತಿರ್ಯಂಚಾಯು ಕರ್ಮ ಮುಗಿದು ಮುಂದಿನ ಭವವೇ ನಮ್ಮದು ಎಂದು ಹಿಂಸೆಯಲ್ಲಿ ಮುಳುಗಿದ್ದ ಮಾರಿದತ್ತನಿಗೆ ಅಷ್ಟಕರ್ಮಗಳ ವಿಸ್ತಾರವಾದ ವಿಚಾರವನ್ನು, ಮೋಕ್ಷವೇ ಅಂತಿಮ ಶಾಶ್ವತ ಸುಖವೆಂದು, ಉಳಿದವೆಲ್ಲವೂ ಅಶಾಶ್ವತವಾದುದೆಂಬ ವಿಷಯ ತಿಳಿಸಿ ಅಭಯರುಚಿ ಧರ್ಮದ ದಾರಿಗೆ ತಂದನು.

ಚರಿತೆಯನ್ನು ಕರ್ಮಸಿದ್ಧಾಂತದ ಅನ್ವಯದೊಂದಿಗೆ ಅಧ್ಯಯನ ನಡೆಸಿದಾಗ ಚರಿತೆಯ ಪಾತ್ರ, ಸನ್ನಿವೇಶಗಳು ಕರ್ಮ ಆಧಾರಿತವಾಗಿಯೇ ಬದಲಾವಣೆಗಳಾಗುವುದು ಸ್ಪಷ್ಟವಾಗುತ್ತದೆ.

## ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್.(ಸಂಪಾದಕರು), ೨೦೧೨, ಸರಳ ಯಶೋಧರ ಚರಿತೆ, ಮಂಗಳಾ ಪ್ರಕಾಶನ ಟೀಚರ್ಸ್ ಕಾಲೋನಿ, ಹೊಸಪೇಟೆ.

೨. ಕೃಷ್ಣಕುಮಾರ್ ಸಿ.ಪಿ.,(ಸಂಪಾದಕರು), ೨೦೦೭, ಜನ್ನ ಸಂಪುಟ ಯಶೋಧರ ಚರಿತೆ, ಅನಂತನಾಥ ಪುರಾಣಂ, ಅನುಭವ ಮುಕುರಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ – ಹಂಪಿ.

೩. ಗೋಪಾಲಕೃಷ್ಣಭಟ್ಟ ತೆಕ್ಕುಂಜೆ, ೨೦೧೯ ಐದನೇ ಮುದ್ರಣ, ಯಶೋಧರ ಚರಿತೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೪. ರಾಘವಾಚಾರ್ ಕ.ವೆಂ.(ಸಂಪಾದಕರು), ೧೯೮೮, ಯಶೋಧರ ಚರಿತೆ, ಉಷಾ ಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು.

೫. ಆಚಾರ್ಯ ಶ್ರೀ ನರೇಂದ್ರಸೇನ, ೧೯೮೫, ಸಿದ್ಧಾಂತಸಾರ ಸಂಗ್ರಹ, ಸ್ವಸ್ತಿಕ್ ಪ್ರಿಂಟರ್ಸ್ ಬಸವನಗುಡಿ ಬೆಂಗಳೂರು.
೬. ಜೋಡಟ್ಟಿ ಟಿ.ಅರ್.(ಅನುವಾದ), ೨೦೧೪, ಕರ್ಮ ವ್ಯವಸ್ಥೆ, ಮನೋಹರ ಮುದ್ರಣಾಲಯ, ಧಾರವಾಡ–೧.
7. ಧರಣೇಂದ್ರಪ್ಪ ಹಣಮಂತಪ್ಪ ಗುಗ್ಗರಿ (ಸಂಪಾದಕರು), ೧೯೮೪, ಜೈನ ಸಿದ್ಧಾಂತ ಸಾರ ಸಂಗ್ರಹ (ಕೈಪಿಡಿ), ಸನ್ಮತಿ ಪ್ರಕಾಶನ, ಮುಂಬಯಿ